2017-18 ನೇ ಸಾಲಿನ ಕ್ಷೇತ್ರ ಪ್ರಯೋಗಗಳು:

ಕ್ರಮ. ಸಂ.	ಬೆಳೆ	ಶೀರ್ಷಿಕೆ	ಗ್ರಾಮದ ಹೆಸರು
1.	ಜೋಳ	ವಿವಿಧ ಜೋಳದ ತಳಿಗಳ ಕಾರ್ಯಕ್ಷಮತೆಯ ಪರಿಶೀಲನೆ	ಲಿಂಗಸುಗೂರು
2.	ಕಡಲೆ	ಕಡಲೆ ತಳಿಗಳ ಕಾರ್ಯಕ್ಷಮತೆಯ ಪರಿಶೀಲನೆ	ಕಪಗಲ್ ಮತ್ತು ಸುಂಕೇಶ್ವರ್
3.	ಬೆಂಡಿ	ರಾಯಚೂರು ಜಿಲ್ಲೆಯಲ್ಲಿ ಹೊಸ ಮತ್ತು ಅಧಿಕ ಇಳುವರಿ ಬೆಂಡೆ ತಳಿ CoBH 4ನ ಪರಿಶೀಲನೆ	ಚಂದ್ರಬಂಡ ಮತ್ತು ಏಗನೂರು
4.	ಗಜ್ಜರಿ	ರಾಯಚೂರು ಜಿಲ್ಲೆಯಲ್ಲಿ ಹೊಸ ಗಜ್ಜರಿ ತಳಿಗಳ ಪರಿಶೀಲನೆ	ಏಗನೂರು ಮತ್ತು ಯರೆಗೇರ

2017-18 ನೇ ಸಾಲಿನ ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳು :

ಕ್ರಮ. ಸಂ.	ಬೆಳೆ	ಶೀರ್ಷಿಕೆ	ಗ್ರಾಮದ ಹೆಸರು
1.	ಭತ್ತ	ಕೂರಿಗೆ ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆ	ಸಿರವಾರ, ಮಾನ್ವಿ ತಾ.
2.	ಭತ್ತ	ಕೂರಿಗೆ ಭತ್ತದಲ್ಲಿ ಎಸ್‌ಟಿಸಿಆರ್ ಆಧಾರಿತ ಪೊಷಕಾಂಶ ನಿರ್ವಹಣೆ ಪ್ರಾತ್ಯಕ್ಷಿಕೆ	ಜಕ್ಕಲದಿನ್ನಿ, ಮಾನ್ವಿ ತಾ.
3.	ಭತ್ತ	ಭತ್ತದಲ್ಲಿ ಸವಳು ತಡೆಯಬಲ್ಲ ತಳಿಗಳ ಪ್ರಾತ್ಯಕ್ಷಿಕೆ	ಸಿರವಾರ, ಮಾನ್ವಿತಾ.
4.	ಭತ್ತ	ಭತ್ತದಲ್ಲಿ ಸಾವಯವ ಕೀಟ ನಿರ್ವಹಣೆಯ ಪ್ರಾತ್ಯಕ್ಷಿಕೆ	ಸಿರವಾರ, ಮಾನ್ವಿ
5.	ಜೋಳ	ಜೋಳದಲ್ಲಿ ಅಧಿಕ ಇಳುವರಿ ತಳಿ ಎಸ್‌ಪಿವಿ-2217 ಪ್ರಾತ್ಯಕ್ಷಿಕೆ	ಲಿಂಗಸುಗೂರು
6.	ಬಿಟಿ ಹತ್ತಿ	ಬಿಟಿ ಹತ್ತಿಯಲ್ಲಿ ಕೆಂಪು ಗುಲಾಬಿ ಕಾಯಿಕೊರಕದ ನಿರ್ವಹಣೆ ಪ್ರಾತ್ಯಕ್ಷಿಕೆ	ಗಬ್ಬೂರು, ಮಸರಕಲ್, ರಾಯಚೂರು ತಾ.
7.	ಚೆಂಡು ಹೂ	ಚೆಂಡು ಹೂವಿನ ಅರ್ಕಾ ಬಂಗಾರ-2 ತಳಿಯನ್ನು ಪರಿಚಯಿಸುವ ಪ್ರಾತ್ಯಕ್ಷಿಕೆ	ಏಗನೂರು ಕಡ್ಗಂದೊಡ್ಡಿ, ರಾಯಚೂರು ತಾ.
8.	ಟೊಮ್ಯಾಟೋ	ಟೊಮ್ಯಾಟೋ ಬೆಳೆಯಲ್ಲಿ ರಂಧ್ರಕೊರೆಯುವ ಹುಳುವಿನ ನಿರ್ವಹಣೆ	ಕುರುಬದೊಡ್ಡಿ, ರಾಯಚೂರು ತಾ.
9.	ಮೆಣಸಿನಕಾಯಿ	ಮೆಣಸಿನ ಕಾಯಿ ಎಲೆ ಮುದುಡು ರೋಗದ ನಿರ್ವಹಣೆ ಪ್ರಾತ್ಯಕ್ಷಿಕೆ	ಸುಂಕೇಶ್ವರಾಳ, ರಾಯಚೂರು ತಾ.
10.	ಎಲೆಕೋಸು	ಎಲೆಕೋಸು ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ ಪ್ರಾತ್ಯಕ್ಷಿಕೆ	ಕಡ್ಗಂದೊಡ್ಡಿ, ರಾಯಚೂರು ತಾ.
11.	ಬದನೆ	ಬದನೆ ಬೆಳೆಯಲ್ಲಿ ಹಣ್ಣು ಮತ್ತು ಕಾಂಡ ಕೊರಕದ ನಿರ್ವಹಣೆ ಪ್ರಾತ್ಯಕ್ಷಿಕೆ	ಕಡ್ಗಂದೊಡ್ಡಿ, ರಾಯಚೂರು ತಾ.
12	ಉಳ್ಳಗಡ್ಡೆ	ಹೊಸ ತಳಿ ಭೀಮ ಶಕ್ತಿಯನ್ನು ಪರಿಚಯಿಸುವ ಪ್ರಾತ್ಯಕ್ಷಿಕೆ	ಯರಗುಂಟಾ, ಇಬ್ರಾಹಿಂದೊಡ್ಡಿ, ರಾಯಚೂರು ತಾ.
13.	ಟೊಮ್ಯಾಟೋ	ಟೊಮ್ಯಾಟೋ ಬೆಳೆಯಲ್ಲಿ ಅರ್ಕಾ ಆಕ್ಷಿನೋ ಪ್ಲಸ್ (ಲಿಗ್ನೈಟ್ ಆಧಾರಿತ ಸೂಕ್ಷ್ಮ ಜೀವಿಗಳ ಉತ್ಪನ್ನ)ನ್ನು ಜನಪ್ರಿಯಗೊಳಿಸುವುದು	ನೆಲಹಾಳ್, ರಾಯಚೂರು ತಾ.
14.	ಮೆಣಸಿನಕಾಯಿ	ಮೆಣಸಿನ ಕಾಯಿ ಬೆಳೆಯಲ್ಲಿ ಅರ್ಕಾ ಆಕ್ಷಿನೋ ಪ್ಲಸ್ (ಲಿಗ್ನೈಟ್ ಆಧಾರಿತ ಸೂಕ್ಷ್ಮ ಜೀವಿಗಳ ಉತ್ಪನ್ನ)ನ್ನು ಜನಪ್ರಿಯಗೊಳಿಸುವುದು	ನೆಲಹಾಳ್, ರಾಯಚೂರು ತಾ.
15	ಹೈನು ದನಗಳು	ಅಧಿಕ ಹಾಲಿನ ಇಳುವರಿ ಮತ್ತು ಗುಣ ಮಟ್ಟ ಹೆಚ್ಚಳಕ್ಕೆ ಬೈಪಾಸ್ ಕೊಬ್ಬಿನ ಬಳಕೆ	ವಿಜಯನಗರ ಕ್ಯಾಂಪ್, ರಾಯಚೂರು ತಾ.
16.	ಹೈನು ದನಗಳು	ಹೈನು ದನಗಳಲ್ಲಿ ಮೆಲುಕು ಚೀಲದ ಆಮ್ಲೀಯತೆ ನಿರ್ವಹಣೆ	ಕಲ್ಮಾಲ, ರಾಯಚೂರು ತಾ.
17.	ತೊಗರಿ	ತೊಗರಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆ	ಬೆಟದೂರ್, ಕಪಗಲ್ ಮಾನ್ವಿ ತಾ.
18.	ಕಡಲೆ	ಕಡಲೆ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆ	ಸುಂಕೇಶ್ವರ್, ದೇವದುರ್ಗ ತಾ.
19.	ಶೇಂಗಾ	ಶೇಂಗಾ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆ	ಯರೆಗುಂಟ, ಯೆರಗೇರಾ, ರಾಯಚೂರು ತಾ.
20.	ಸೂರ್ಯಕಾಂತಿ	ಸೂರ್ಯಕಾಂತಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆ	ಬೆನಕನಾಳ್, ಬೆಲ್ಲದಮರಡಿ, ಲಿಂಗಸೂಗೂರು ತಾ.

ಈ ತ್ರೈಮಾಸಿಕದಲ್ಲಿ ಕೇಂದ್ರದ ವಿಜ್ಞಾನಿಗಳ ಲೇಖನಿಯಿಂದ ಮೂಡಿಬಂದ ಜನಪ್ರಿಯ ವಿಜ್ಞಾನ ಲೇಖನಗಳು

ಕ್ರ. ಸಂ.	ಲೇಖನದ ಶೀರ್ಷಿಕೆ	ದಿನಾಂಕ	ಪತ್ರಿಕೆ	ವಿಜ್ಞಾನಿಯ ಹೆಸರು
1	ಮಿರಿ ಮಿರಿ ಕೆಂಗುರಿಗೊಂದು ಸಂತೆ	18-04-2017	ಪ್ರಜಾವಾಣಿ, ಕರ್ನಾಟಕ ದರ್ಶನ	ಡಾ. ಬಿ.ಕೆ. ರಮೇಶ್ ವಿಜ್ಞಾನಿ (ಪಶು ವಿಜ್ಞಾನ)
2	ದಿ ಅಪೀಲ್ ಆಫ್ ಕೆಂಗುರಿಸ್	16-05-2017	ಡೆಕ್ಕನ್ ಹೆರಾಲ್ಡ್, ಸ್ಪೆಕ್ಟ್ರಮ್	ಡಾ. ಬಿ.ಕೆ. ರಮೇಶ್ ವಿಜ್ಞಾನಿ (ಪಶು ವಿಜ್ಞಾನ)

ಪ್ರಧಾನ ಸಂಪಾದಕರು : ಡಾ. ಎಂ.ವಿ. ರವಿ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ಸಂಪಾದಕರು : ಡಾ. ರಮೇಶ್ ಜಿ.ಕೆ., ವಿಜ್ಞಾನಿ (ಪಶು ವಿಜ್ಞಾನ)
ಡಾ. ಅನುಪಮ ಸಿ., ವಿಜ್ಞಾನಿ (ಗೃಹ ವಿಜ್ಞಾನ)
ಶ್ರೀಮತಿ ಶ್ವೇತಾ ಜಿ.ಎನ್., ವಿಜ್ಞಾನಿ (ಬೇಸಾಯ ಶಾಸ್ತ್ರ)
ಡಾ. ಬದರಿ ಪ್ರಸಾದ್ ಪಿ.ಆರ್., ವಿಜ್ಞಾನಿ (ಕೃಷಿ ಕೀಟಶಾಸ್ತ್ರ)

ಪುಟ ವಿನ್ಯಾಸ ಮತ್ತು ಅಕ್ಷರ ಜೋಡಣೆ :
ಶ್ರೀ. ದೇವರಾಜ್ ನಾಯಕ, ಕಾರ್ಯಕ್ರಮ ಸಹಾಯಕ (ಗಣಕಯಂತ್ರ) ಮತ್ತು ಕುಮಾರಿ ಶಿಲ್ಪಾ

ಇವರಿಂದ

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
kvkraichur@gamil.com
kvk.Raichur@icar.gov.in
www.kvkraichur.com

ತೆರೆದ-ಅಂಚೆ

ಗೆ,

www.kvkraichur.com
email : kvkraichur@gmail.com
kvk.Raichur@icar.gov.in

ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ತ್ರೈಮಾಸಿಕ ವಾರ್ತಾಪತ್ರ

ಸಂಪುಟ : 15 ಸಂಚಿಕೆ: 1

ಒಳ ಪುಟಗಳಲ್ಲಿ :

- ವಿಶ್ವ ಪರಿಸರ ದಿನಾಚರಣೆ
- ಕೃಷಿ ಅಭಿಯಾನ
- ಜತ್ತನೆ ಪೂರ್ವ ತರಬೇತಿ ಕಾರ್ಯಕ್ರಮಗಳು
- ಕೃಷಿ ಬೆಲೆ ಆಯೋಗದ "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ" ಯೋಜನೆಯ ಅನುಷ್ಠಾನ
- 2017-18 ನೇ ಸಾಲಿನ ಕ್ಷೇತ್ರ ಪರೀಕ್ಷೆಗಳು ಮತ್ತು ಪ್ರಾತ್ಯಕ್ಷಿಕೆಗಳು
- ವಿಸ್ತರಣಾ ಚಟುವಟಿಕೆಗಳು

ಆತ್ಮೀಯರೆ,

ಹೊಸ ಹಂಗಾಮಿನ ಶುಭಾರಂಭದ ನಿರೀಕ್ಷೆಯಲ್ಲಿ ರೈತರು ಮಳೆರಾಯನ ಕೃಪೆಗಾಗಿ ಕಾತರಿಸುತ್ತಾ ಕೃಷಿ ಕಾರ್ಯಗಳಿಗೆ ಸನ್ನದ್ಧರಾಗುವ ಸಮಯವಿದು. ರಾಯಚೂರಿನ ಕೃಷಿ ವಿಜ್ಞಾನ ಕೇಂದ್ರದ ಚಟುವಟಿಕೆಗಳಿಗೆ ಹೊಸ ಚಿಂತನೆಯ, ಹೊಸ ಚೈತನ್ಯದ ಅಗತ್ಯವನ್ನು ಮನಗಂಡ ಕೃಷಿ ವಿಶ್ವವಿದ್ಯಾಲಯವು ವಿಜ್ಞಾನಿಗಳ ಹೊಸ ತಂಡವನ್ನು ಕೇಂದ್ರಕ್ಕೆ ನಿಯೋಜಿಸಿದೆ. ಕೇಂದ್ರದ ಮುಖ್ಯಸ್ಥನಾದ ನನ್ನಿಂದ ಮೊದಲ್ಗೊಂಡು ಇತರೇ ಎಲ್ಲ ವಿಜ್ಞಾನಿಗಳೂ ಹೊಸ ಹುರುಪಿನಿಂದ ತಮ್ಮ ಸೇವೆಯನ್ನು ನೀಡಲು ಸಿದ್ದರಾಗಿದ್ದಾರೆ.

ಈ ವರ್ಷದಲ್ಲಿ ಶೇಕಡ 95 ಕ್ಕಿಂತಲೂ ಹೆಚ್ಚಿನ ವಾಡಿಕೆ ಮಳೆಯಿದೆ ಎಂಬ ಹವಾಮಾನ ಇಲಾಖೆಯ ಮೂನ್ಸೂಚನೆ, ಕಳೆದ ವರ್ಷದ ನಿರಾಶಾದಾಯಕ ಮಳೆಯ ಪ್ರಮಾಣದಿಂದ ನಲುಗಿದ್ದ ರೈತರಲ್ಲಿ ಉತ್ತಮ ನಾಳೆಗಳ ನಿರೀಕ್ಷೆಯನ್ನು ಮೂಡಿಸಿದೆ. ಅಂತೆಯೇ, ನಮ್ಮ ಕೇಂದ್ರವೂ ರೈತರ ಹೊಲಗಳಲ್ಲಿ ಕೈಗೊಳ್ಳುವ ಪ್ರಾತ್ಯಕ್ಷಿಕೆಗಳಿಗಾಗಿ ಅಗತ್ಯವಿರುವ ವಿವಿಧ ಬೆಳೆಗಳ ಉತ್ತಮ ತಳಿಗಳ ಬೀಜಗಳನ್ನು ಈಗಾಗಲೇ ಸಂಗ್ರಹಿಸಿಟ್ಟುಕೊಂಡು ಸಿದ್ಧವಾಗಿದೆ.

ರೈತರನ್ನು ಮುಂಗಾರು ಹಂಗಾಮಿಗೆ ಸಿದ್ಧಗೊಳಿಸುವ ಸಲುವಾಗಿ ರಾಜ್ಯ ಸರ್ಕಾರ, ಕೃಷಿ ಇಲಾಖೆಯ ಮುಂದಾಳತ್ವದಲ್ಲಿ ಹಮ್ಮಿಕೊಂಡಿದ್ದ 'ಕೃಷಿ ಅಭಿಯಾನ' ದಲ್ಲಿ ನಮ್ಮ ಕೇಂದ್ರದ ತಜ್ಞರು ಸಕ್ರಿಯವಾಗಿ ಭಾಗವಹಿಸಿ, ಆಯಾ ಭಾಗದ ರೈತರ ಆಸಕ್ತಿ, ಬೇಡಿಕೆಗಳಿಗೆ ಅನುಗುಣವಾಗಿ ವೈಜ್ಞಾನಿಕ ಮಾಹಿತಿಗಳನ್ನು ನೀಡಿದ್ದಾರೆ.

ಈ ನಡುವೆ, ಕರ್ನಾಟಕ ಸರ್ಕಾರದ ಕೃಷಿ ಬೆಲೆ ಆಯೋಗ, 'ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ' ಎಂಬ ಕಾರ್ಯಯೋಜನೆಯೊಂದನ್ನು ರೂಪಿಸಿದೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಜಕ್ಕಲದಿನ್ನಿ ಗ್ರಾಮದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ನಮ್ಮ ಕೇಂದ್ರಕ್ಕೆ ವಹಿಸಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯವಾಗಿದೆ. ಯೋಜನೆಯ ಅನುಷ್ಠಾನವನ್ನು ಉತ್ಸುಕತೆಯಿಂದ ಪ್ರಾರಂಭಿಸಿರುವ ಕೇಂದ್ರವು, ಈ ಯೋಜನೆ ಹಾಗೂ ಕೇಂದ್ರದ ಇತರೆಲ್ಲ ರೈತ ಸ್ನೇಹಿ ಕಾರ್ಯಕ್ರಮಗಳ ಯಶಸ್ಸಿನಲ್ಲಿ ಭಾಗಿದಾರರಾಗಲು ತಮ್ಮೆಲ್ಲರ ಸಹಕಾರವನ್ನು ಈ ಮೂಲಕ ಕೋರುತ್ತಿದೆ.

ಇಂತಿತಮ್ಮ ನಂಬುಗೆಯ

ಡಾ. ಎಂ.ವಿ. ರವಿ

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ವಿಶ್ವ ಪರಿಸರ ದಿನಾಚರಣೆ

ಜೂನ್ ತಿಂಗಳ ಐದನೆಯ ದಿನ "ವಿಶ್ವ ಪರಿಸರ ದಿನ". ಈ ವರ್ಷದ ಪರಿಸರ ದಿನಾಚರಣೆಯನ್ನು ಮಾನ್ವಿ ತಾಲೂಕಿನ ಜಕ್ಕಲದಿನ್ನಿ ಗ್ರಾಮದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಹೊಂಗೆ, ಬೇವು, ಹೆಬ್ಬೇವು, ಬಾದಾಮಿ, ಗ್ಲಿರಿಸಿಡಿಯಾ ಮುಂತಾದ ಒಂದು ಸಾವಿರ ಅರಣ್ಯ ಸಸಿಗಳನ್ನು ಕೇಂದ್ರದ ವತಿಯಿಂದ ಜಕ್ಕಲದಿನ್ನಿ ಗ್ರಾಮಸ್ಥರಿಗೆ ವಿತರಿಸಲಾಯಿತು. ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿಸ್ತರಣಾ ನಿರ್ದೇಶಕರಾದ ಡಾ.ಎಸ್. ಕೆ. ಮೇಟಿ ಅವರು ಪರಿಸರದಲ್ಲಿ ಉಂಟಾಗಿರುವ ಹವಾಮಾನ ವೈಪರಿತ್ಯಗಳ ಬಗ್ಗೆ ರೈತರ ಗಮನ ಸೆಳೆದು, ಪರಿಸರ ಸಂರಕ್ಷಣೆಯಿಂದಷ್ಟೇ ಉತ್ತಮ ಮಳೆ-ಬೆಳೆ ಸಾಧ್ಯ ಎಂಬ ಅಂಶವನ್ನು ಮನವರಿಕೆ ಮಾಡಿಕೊಟ್ಟರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೃಷಿ ತಂತ್ರಜ್ಞರ ಸಂಸ್ಥೆಯ ಶ್ರೀಯುತ ಎಸ್.ಎಂ.ಸಿದ್ದಾರೆಡ್ಡಿಯವರು ಅರಣ್ಯ ಸಸಿಗಳನ್ನು ಬೆಳೆಸಿ, ಅದರಿಂದ ಆದಾಯ ಗಳಿಸುವ ತಮ್ಮ ಅನುಭವವನ್ನು ರೈತರೊಂದಿಗೆ ಹಂಚಿಕೊಂಡರು. ಈ ಸಂದರ್ಭದಲ್ಲಿ ಗಣ್ಯರಿಂದ ವಿವಿಧ ಸಸಿಗಳನ್ನು ಕೃಷಿ ಬೆಲೆ ಆಯೋಗದ ಸ್ಥಳೀಯ ಕಛೇರಿಯ ಮುಂಭಾಗದಲ್ಲಿ ನೆಡಲಾಯಿತು. ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳಾದ ಶ್ರೀ. ಸಿದ್ದಪ್ಪಕ್ಕಿ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಎಂ. ವಿ. ರವಿ ಮತ್ತು ವಿಜ್ಞಾನಿಗಳಾದ ಡಾ.ಬಿ.ಕೆ.ರಮೇಶ್, ಡಾ.ಪಿ.ಅನುಪಮ, ಹಾಗೂ ಶ್ರೀಮತಿ ಬಿ.ಎನ್. ಶ್ವೇತಾ, ಅವರು ಭಾಗವಹಿಸಿದ್ದರು. ಜಕ್ಕಲದಿನ್ನಿ ಗ್ರಾಮದ ಮುಖಂಡರ ನೇತೃತ್ವದಲ್ಲಿ ಎಲ್ಲಾ ರೈತ ಭಾಂದವರು ಸಸಿ ನೆಡುವ ಕಾರ್ಯಕ್ರಮವನ್ನು ಹಬ್ಬದಂತೆ ನೆರವೇರಿಸಿದರು.




ಕೃಷಿ ಅಭಿಯಾನದಲ್ಲಿ ಭಾಗಿಯಾದ ಕೃಷಿ ವಿಜ್ಞಾನ ಕೇಂದ್ರ

'ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ' ಎಂಬ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಡಿ ಆಯೋಜನೆಗೊಂಡ 'ಕೃಷಿ ಅಭಿಯಾನ'ದಲ್ಲಿ ಕೃಷಿ ವಿಜ್ಞಾನ ಕೇಂದ್ರವು ಕೃಷಿ ಮತ್ತು ಕೃಷಿ ಸಂಬಂಧಿತ ಇತರೆ ಇಲಾಖೆಗಳೊಂದಿಗೆ ಸಕ್ರಿಯವಾಗಿ ಭಾಗವಹಿಸಿತು. ಕೇಂದ್ರ ವಿಜ್ಞಾನಿಗಳಾದ ಡಾ.ಎಂ. ವಿ. ರವಿ, ಡಾ.ಬಿ.ಕೆ.ರಮೇಶ್, ಡಾ. ಪಿ. ಅನುಪಮ, ಶ್ರೀ.ಪಿ.ಆರ್ ಬದರಿ ಪ್ರಸಾದ್ ಮತ್ತು ಶ್ರೀಮತಿ ಬಿ.ಎನ್. ಶ್ವೇತಾ ಅವರು ರಾಯಚೂರು, ಮಾನ್ವಿ, ದೇವದುರ್ಗ ತಾಲೂಕುಗಳ ವಿವಿಧ ರೈತ ಸಂಪರ್ಕ ಕೇಂದ್ರಗಳಲ್ಲಿ ಜರುಗಿದ 'ರೈತ-ವಿಜ್ಞಾನಿ ಸಂವಾದ ಕಾರ್ಯಕ್ರಮ'ಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ವಿವಿಧ ಬೆಳೆ ಪದ್ಧತಿಗಳು, ರೋಗ ಮತ್ತು ಕೀಟ ನಿಯಂತ್ರಣ, ಸಮಗ್ರ ಕೃಷಿ, ಹೈನುಗಾರಿಕೆ, ಕುರಿಸಾಕಾಣಿಕೆ ಮತ್ತು ಇತರ ಆದಾಯ ವೃದ್ಧಿಸುವ ಚಟುವಟಿಕೆಗಳ ಬಗ್ಗೆ ರೈತರೊಂದಿಗೆ ಚರ್ಚೆಯಲ್ಲಿ ಭಾಗಿಯಾದರು.






ಮುಂಗಾರು ಪೂರ್ವ ತರಬೇತಿ ಕಾರ್ಯಕ್ರಮಗಳು

ಕೇಂದ್ರ ಸರ್ಕಾರದ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ(NFSM) ಮತ್ತು ರಾಷ್ಟ್ರೀಯ ಎಣ್ಣೆಕಾಳು ಮತ್ತು ತಾಳೆ ಬೆಳೆ ಅಭಿವೃದ್ಧಿ ಯೋಜನೆ (NMOOP) ಯಡಿ, ಕೃಷಿ ವಿಜ್ಞಾನ ಕೇಂದ್ರದಿಂದ ವಿವಿಧ ಮುಂಗಾರು ಪೂರ್ವ ತರಬೇತಿ ಕಾರ್ಯಕ್ರಮಗಳನ್ನು ಜೂನ್ ತಿಂಗಳ ಮೊದಲ ಪಾಕ್ಷಿಕದಲ್ಲಿ ಹಮ್ಮಿಕೊಳ್ಳಲಾಗಿತ್ತು. ಯೋಜನೆಯಡಿಯಲ್ಲಿ ತೊಗರಿ ಮತ್ತು ನವಣೆ ಬೆಳೆಗಳ ಪ್ರಾತ್ಯಕ್ಷಿಕೆಗಾಗಿ ಆಯ್ಕೆಗೊಂಡ ಕಪ್ಪಗಲ್ ಮತ್ತು ಮಿಡಗಲದಿನ್ನಿ ಗ್ರಾಮದ ಕೃಷಿಕರಿಗೆ ಕ್ರಮವಾಗಿ ಆಯಾ ಬೆಳೆಗಳಿಗೆ ಅನುಗುಣವಾಗಿ ಬಿತ್ತನೆ ಪೂರ್ವ ಮಾಹಿತಿ ಮತ್ತು ಪರಿಕರಗಳ ವಿವರಣೆಯನ್ನು ಕೃಷಿ ವಿಜ್ಞಾನ ಕೇಂದ್ರದ ಬೇಸಾಯ ಶಾಸ್ತ್ರಜ್ಞರಾದ ಶ್ರೀಮತಿ ಬಿ.ಎನ್.ಶ್ವೇತಾ ಅವರ ಮೇಲ್ವಿಚಾರಣೆಯಲ್ಲಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ತೊಗರಿ ಬೀಜಕ್ಕೆ ರೈಜೋಬಿಯಂ, ಪಿ.ಎಸ್.ಬಿ. ಹಾಗೂ ಟ್ರೈಕೋಡರ್ಮಾ ಜೈವಿಕ ಗೊಬ್ಬರಗಳ ಬೀಜೋಪಚಾರದ ಪದ್ಧತಿ ಪ್ರಾತ್ಯಕ್ಷಿಕೆಯನ್ನು ನೀಡಿ, ಅದರ ಮಹತ್ವವನ್ನು ಮನವರಿಕೆ ಮಾಡಲಾಯಿತು.

ಇದರಂತೆಯೇ **NMOOP** ಯೋಜನೆಯಡಿ ಶೇಂಗಾ ಹಾಗೂ ಸೂರ್ಯಕಾಂತಿ ಬೆಳೆ ಪ್ರಾತ್ಯಕ್ಷಿಕೆಗಳಿಗೆ ಆಯ್ಕೆಯಾದ ಜಿಲ್ಲೆಯ ವಿವಿಧ ಗ್ರಾಮಗಳ ಕೃಷಿಕರಿಗೂ ಬಿತ್ತನೆ ಪೂರ್ವ ತರಬೇತಿಗಳನ್ನು ಹಮ್ಮಿಕೊಂಡು ಪರಿಕರಗಳನ್ನು ವಿತರಿಸಲಾಯಿತು. ತರಬೇತಿ ನೀಡುವಲ್ಲಿ ಕೇಂದ್ರ ವಿಜ್ಞಾನಿಗಳಾದ ಡಾ.ಬಿ.ಕೆ.ರಮೇಶ್, ಡಾ.ಪಿ.ಅನುಪಮ ಮತ್ತು ಶ್ರೀ.ಪಿ. ಆರ್.ಬದರಿ ಪ್ರಸಾದ್ ಅವರು ಸಕ್ರಿಯವಾಗಿ ಪಾಲ್ಗೊಂಡರು.

ಇತರೆ ತರಬೇತಿಗಳು :

- ಜಿಲ್ಲೆಯ 80 ಜಲದೂತರಿಗೆ ದಿನಾಂಕ 11-05-2017 ರಂದು "ಜಲವೇ ಜೀವನ" ಎಂಬ ಶೀರ್ಷಿಕೆಯಡಿ ನೀರಿನ ಸದ್ಬಳಕೆಯ ಅರಿವು ಮೂಡಿಸಲು ಒಂದು ದಿನದ ತರಬೇತಿಯನ್ನು ನಬಾರ್ಡ್ ಅವರ ಸಹಭಾಗಿತ್ವದಲ್ಲಿ ಏರ್ಪಡಿಸಲಾಗಿತ್ತು. ರೈತರು ಕೃಷಿಯಲ್ಲಿ ನೀರಿನ ಬಳಕೆಯ ಮಿತವ್ಯಯ ಸಾಧಿಸಬಹುದಾದ ಸಾಧ್ಯತೆಗಳ ಬಗ್ಗೆ ಈ ಕಾರ್ಯಾಗಾರದಲ್ಲಿ ಜಲದೂತರಿಗೆ ಮನವರಿಕೆ ಮಾಡಿಕೊಡಲಾಯಿತು ಮತ್ತು ಈ ವಿಷಯಗಳ ಬಗ್ಗೆ ಗ್ರಾಮ ಮಟ್ಟದಲ್ಲಿ ರೈತರಿಗೆ ಅರಿವು ಮೂಡಿಸುವ ಬಗ್ಗೆ ತಿಳಿಸಲಾಯಿತು.
- ಕೋರಮಂಡಲ್ ಇಂಟರ್ ನ್ಯಾಷನಲ್ ಕಂಪನಿಯ ಸಹಯೋಗದಲ್ಲಿ ಕೇಂದ್ರವು ಭತ್ತ ಮತ್ತು ಹತ್ತಿಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ಬಗ್ಗೆ ಒಂದು ದಿನದ ತರಬೇತಿಯನ್ನು ದಿನಾಂಕ 26-05-2017 ರಂದು ಆಯೋಜನೆಗೊಳಿಸಿತ್ತು. ವಿಶ್ವವಿದ್ಯಾಲಯದ ವಿವಿಧ ತಜ್ಞರು ರೈತರಿಗೆ ಉಪಯುಕ್ತ ಮಾಹಿತಿ ನೀಡುವಲ್ಲಿ ಕೇಂದ್ರಕ್ಕೆ ನೆರವಾದರು.






ಕೃಷಿ ಬೆಲೆ ಆಯೋಗದ ಪ್ರಾಯೋಗಿಕ ಕಾರ್ಯಯೋಜನೆ 'ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ'ಯ ಅನುಷ್ಠಾನ

ಕರ್ನಾಟಕ ಸರ್ಕಾರದ ಕೃಷಿ ಬೆಲೆ ಆಯೋಗ, "ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ' ಎಂಬ ಕಾರ್ಯಯೋಜನೆಯೊಂದನ್ನು ಸಿದ್ಧಪಡಿಸಿದೆ. ಈ ಯೋಜನೆಯ ಪ್ರಾಯೋಗಿಕ ಅನುಷ್ಠಾನಕ್ಕೆ ಮೊದಲನೆ ಹಂತದಲ್ಲಿ ರಾಜ್ಯದ ಎಂಟು ಜಿಲ್ಲೆಗಳನ್ನು ಆಯ್ದುಕೊಳ್ಳಲಾಗಿದೆ. ರಾಯಚೂರು ಜಿಲ್ಲೆಯೂ ಈ ಯೋಜನೆಯ ವ್ಯಾಪ್ತಿಯಲ್ಲಿದ್ದು, ಮಾನ್ವಿ ತಾಲೂಕಿನ ಜಕ್ಕಲದಿನ್ನಿ ಗ್ರಾಮವು ಯೋಜನೆಯ ಅನುಷ್ಠಾನಕ್ಕೆ ಆಯ್ಕೆಗೊಂಡಿದೆ. ರಾಷ್ಟ್ರೀಯ ಪ್ರಶಸ್ತ ಪುರಸ್ಕೃತ ರಾಯಚೂರಿನ ಕೃಷಿ ವಿಜ್ಞಾನ ಕೇಂದ್ರಕ್ಕೆ ಅನುಷ್ಠಾನದ ಜವಾಬ್ದಾರಿಯನ್ನು ವಹಿಸಲಾಗಿದೆ. ಕೃಷಿ ಮತ್ತು ಕೃಷಿ ಸಂಬಂಧಿತ ವಿವಿಧ ಇಲಾಖೆಗಳ ಇಲಾಖಾವಾರು ಕಾರ್ಯಕ್ರಮಗಳು ಆದ್ಯತೆಯ ಮೇರೆಗೆ ಜಕ್ಕಲದಿನ್ನಿ ಗ್ರಾಮದಲ್ಲಿ ಜಾರಿಯಾಗುವಲ್ಲಿ ಕೃಷಿ ವಿಜ್ಞಾನ ಕೇಂದ್ರ, ಸರ್ಕಾರಿ ಇಲಾಖೆಗಳು ಮತ್ತು ಗ್ರಾಮದ ಮಧ್ಯೆ ಕೊಂಡಿಯಾಗಿ ಕೆಲಸ ನಿರ್ವಹಿಸುತ್ತಿದೆ.

ಈ ಯೋಜನೆಯಡಿ ಮೊದಲ ವರ್ಷದ ಫಲಾನುಭವಿಗಳಾಗಿ ಗ್ರಾಮದ 25 ಜನ ಉತ್ಸಾಹಿ ರೈತ ಹಾಗೂ ರೈತ ಮಹಿಳೆಯರನ್ನು ಆಯ್ಕೆ ಮಾಡಲಾಗಿದೆ. ಈ ಕೃಷಿಕರಿಗೆ ಸಂಬಂಧಿಸಿದಂತೆ ಎಲ್ಲೆಗೆರೆ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. ಈ ಸಮೀಕ್ಷೆಯ ಆಧಾರದಲ್ಲಿ ಪ್ರತಿ ರೈತನ ಆದಾಯ ವೃದ್ಧಿಗೆ ಬೇಕಾದ ಕಾರ್ಯಕ್ರಮಗಳ ಅವಶ್ಯಕತೆಗಳನ್ನು ಗುರುತಿಸಲಾಗಿದೆ. ಈ ಸಂಬಂಧ ಪ್ರತಿ ತಿಂಗಳು ಎರಡನೇ ಮಂಗಳವಾರದಂದು ವಿವಿಧ ಇಲಾಖೆಗಳ ಅಧಿಕಾರಿಗಳು ಜಕ್ಕಲದಿನ್ನಿ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿನ ರೈತರೊಂದಿಗೆ ಚರ್ಚೆಯಲ್ಲಿ ತೊಡಗಲು ವೇದಿಕೆಯೊಂದನ್ನು ಕೃಷಿ ವಿಜ್ಞಾನ ಕೇಂದ್ರ ಸಿದ್ಧಪಡಿಸಿದೆ. ಗ್ರಾಮದ ಯುವಕನೊಬ್ಬನನ್ನು ಅನುವುಗಾರನನ್ನಾಗಿ ಗುರುತಿಸಿ, ಯೋಜನೆಯ ಸುಲಭ ಅನುಷ್ಠಾನ ಹಾಗೂ ನಿರ್ವಹಣೆಗೆ ಸ್ಥಳೀಯವಾಗಿ ಕಛೇರಿಯೊಂದನ್ನು ತೆರೆಯಲಾಗಿದೆ.

ಜೂನ್ ತಿಂಗಳ 24-25 ನೇ ತಾರೀಖಿ, ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಲ್ಲಿ ಜರುಗಿದ 'ರೈತರ ಆದಾಯ ಮತ್ತು ಕಲ್ಯಾಣ ವೃದ್ಧಿ' ರಾಷ್ಟ್ರೀಯ ಕಾರ್ಯಾಗಾರಕ್ಕೆ ಜಕ್ಕಲದಿನ್ನಿಯ ರೈತ ಫಲಾನುಭವಿಗಳನ್ನು ಕೇಂದ್ರದ ವತಿಯಿಂದ ಕರೆದೊಯ್ಯಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಎಂ. ವಿ. ರವಿ ಅವರು ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳ ಬಗ್ಗೆ ಕಾರ್ಯಾಗಾರದಲ್ಲಿ ವಿಷಯ ಮಂಡನೆ ಮಾಡಿದರು. ನಂತರ ರೈತರನ್ನು ಬೆಂಗಳೂರು ಭಾಗದ ಪ್ರಗತಿಪರ ರೈತರ ಹೊಲಗಳಿಗೆ ಕ್ಷೇತ್ರ ಭೇಟಿ ಮಾಡಿಸಿ, ವಿಚಾರ ವಿನಿಮಯಕ್ಕೆ ಅನುವು ಮಾಡಿಕೊಡಲಾಯಿತು.




